## Karunaduexams.com FDA/SDA Mock Test-2 GENERAL STUDIES PAPER

1. ಸುಲೈಮಾನ್ ಮತ್ತು ಆಲ್ ಮಸೂದಾರ ಗ್ರಂಥಗಳು ಈ ಕೆಳಗಿನ ಯಾವ ರಾಜವಂಶಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ.

   1. ಬಾದಮಿ ಚಾಲುಕ್ಯರು  2. ರಾಷ್ಟ್ರಕೂಟರು  3. ದೆಹಲಿ ಸುಲ್ತಾನರು  4. ಮೊಘಲರು

2. ಈ ಕೆಳಗಿನ ಯಾವ ಹೊಂದಾಣಿಕೆ/ಗಳು ಸರಿಯಾಗಿವೆ.

   1. ದೇವೇಂದ್ರನಾಥ – ಆಟೋ ಬಯಾಗ್ರಫಿ
   2. ಕೇಶವಚಂದ್ರ ಸೇನ – ಲೆಕ್ಚರ್ ಆನ್ ಇಂಡಿಯಾ
   3. ದಯಾನಂದ ಸರಸ್ವತಿ – ಲೈಟ್ ಆಫ್ ಟ್ರೂತ್
   4. ಮೆಗಾಸ್ತನಿಸ್ – ಇಂಡಿಕಾ

   1. 1 & 4  2. 2 & 4  3. 3 & 4  4. 1, 2, 3 & 4

3. ಈ ಕೆಳಗಿನ ಯಾವ ಹೊಂದಾಣಿಕೆ/ಗಳು ಸರಿಯಾಗಿವೆ.

| | ವೇದ | | ಮಾಹಿತಿ |
|---|---|---|---|
| 1. | ಋಗ್ವೇದ | – | ದೇವತೆಗಳನ್ನು ಸ್ತುತಿಸುವ ಶ್ಲೋಕಗಳನ್ನು ಹೊಂದಿದೆ. |
| 2. | ಯರ್ಜುವೇದ | – | ಯಜ್ಞಯಾಗಾದಿಗಳು |
| 3. | ಸಾಮವೇದ | – | ಸಾಮಗಾಯನ |
| 4. | ಅಥರ್ವಣವೇದ | – | ಮಾಟ, ಮಂತ್ರಗಳ ದೇವತಾರಾಧನೆ |

   1. 2, 3 & 4  2. 1, 2 & 3  3. 1, 2, 3 & 4  4. 1, 3 & 4

4. ಜೈನಧರ್ಮಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಯು ತಪ್ಪಾಗಿದೆ.

   1. ವೃಷಭದೇವ ಮೊದಲನೇಯ ತೀರ್ಥಂಕರ
   2. ವರ್ಧಮಾನ ಮಹಾವೀರ ಕೊನೆಯ ತೀರ್ಥಂಕರ
   3. ಪಾರ್ಶ್ವನಾಥ ಇಪ್ಪತ್ಮೂರನೆಯ ತೀರ್ಥಂಕರ
   4. ನಾಲ್ಕು ಆರ್ಯಸತ್ಯಗಳು ಜೈನಧರ್ಮದಲ್ಲಿ ಕಂಡುಬರುತ್ತವೆ.

5. ಹೊಂದಿಸಿ ಬರೆಯಿರಿ.

   1. ಅವಂತಿ – ಎ) ಚಂಪ
   2. ವತ್ಸ – ಬಿ) ಮಥುರಾ
   3. ಶೂರಸೇನ – ಸಿ) ಕೌಶಂಬಿ
   4. ಅಂಗ – ಡಿ) ಮಹಿಷ್ಮತಿ

| | A | B | C | D |
|---|---|---|---|---|
| 1. | 4 | 3 | 2 | 1 |
| 2. | 1 | 2 | 3 | 4 |
| 3. | 4 | 2 | 3 | 1 |
| 4. | 1 | 3 | 4 | 2 |

6. ಈ ಕೆಳಗಿನ ಯಾವ ರಜಪೂತರು ಅಗ್ನಿ ಕುಲಕ್ಕೆ ಸೇರಿಲ್ಲ?

   1. ಪ್ರತಿಹಾರ  2. ಪರಮಾರ  3. ಚೌಹನ  4. ಚಂದೇಲರು

7. ಮೂರು ಸಮುದ್ರಗಳ ನೀರನ್ನು ಕುಡಿದ ಕುದುರೆಯನ್ನು ವಾಹನವನ್ನಾಗಿ ಹೊಂದಿದೆ ಶಾತವಾಹನ ಅರಸ ಯಾರು?
   1. ಸಿಮುಖ
   2. ಗೌತಮಿ ಪುತ್ರ ಶಾತಕರ್ಣಿ
   3. ವಸಿಷ್ಠಪುತ್ರ ಪುಲಮಾಯಿ
   4. ಯಜ್ಞಶ್ರೀ ಶಾತಕರ್ಣಿ

8. ಈ ಕೆಳಗಿನ ಯಾವುವು ತಮಿಳಿನ ಮಹಾಕಾವ್ಯಗಳಾಗಿವೆ.
   1. ಶಿಲಾಪಾದಿಕಾರಂ ಮತ್ತು ಮಣಿಮೇಘಲೈ.
   3. ಕುರುಳ್ ಮತ್ತು ಜೀವಿಕ ಚಿಂತಾಮಣಿ
   2. ಕುರುರ್ಳ ಮತ್ತು ಶಿಲಾಪಾದಿಕಾರಂ
   4. ಮಣಿಮೇಘಲೈ ಮತ್ತು ಕುರುಳ್

9. ಮಯೂರವರ್ಮನು ಕದಂಬ ರಾಜಮನೆತನದ ಸ್ಥಾಪಕ ಎಂದು ಈ ಕೆಳಗಿನ ಯಾವ ಶಾಸನ ಮಾಹಿತಿ ನೀಡುತ್ತದೆ.
   1. ಚಂದ್ರವಳ್ಳಿ ಶಾಸನ
   2. ಹಲ್ಮಿಡಿ ಶಾಸನ
   3. ತಾಳಗುಂದ ಶಾಸನ
   4. ಯಾವುದೂ ಅಲ್ಲ

10. ಪೆರಿಯಾಲ, ಸುರಮಾರ ಮಣಿಮಂಗಳ ಯುದ್ಧಗಳು ಈ ಕೆಳಗಿನ ಯಾವ ರಾಜರುಗಳ ಮಧ್ಯೆ ನಡೆಯಿತು.
   1. 2ನೇ ಪುಲಿಕೇಶಿ & ಮಹೇಂದ್ರವರ್ಮ
   2. 2ನೇ ಪುಲಿಕೇಶಿ & 1ನೇ ನರಸಿಂಹವರ್ಮ
   3. ಇಮ್ಮಡಿ ಪುಲಿಕೇಶಿ & 1ನೇ ಮಹೇಂದ್ರವರ್ಮ
   4. ಇಮ್ಮಡಿ ಪುಲಿಕೇಶಿ & 1ನೇ ನರಸಿಂಹವರ್ಮ

11. ಸಿತತನ್ನವಾಸಲಾ ಚಿತ್ರಕಲೆಗಳು ಈ ಕೆಳಗಿನ ಯಾವ ರಾಜವಂಶದವರಿಗೆ ಸಂಬಂಧಿಸಿವೆ.
   1. ಚೋಳ
   2. ಪಾಂಡ್ಯ
   3. ಪಲ್ಲವ
   4. ಚೇರ

12. ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದಂತೆ
   1. 1ನೇ ತೈಲಪನು ಕಲ್ಯಾಣಿ ಚಾಲುಕ್ಯರ ಸ್ಥಾಪಕನಾಗಿದ್ದಾನೆ.
   2. 6ನೇ ವಿಕ್ರಮಾಧಿತ್ಯನ ಆಸ್ಥಾನದಲ್ಲಿದ್ದ ವಿಜ್ಞಾನೇಶ್ವರ ಮಿತಾಕ್ಷರ ಎಂಬ ನ್ಯಾಯಾಶಾಸ್ತ್ರ ಗ್ರಂಥವನ್ನು ರಚಿಸಿದ್ದಾನೆ.
   1. ಸರಿ
   2. 2 ಸರಿ
   3. 1 & 3 ಸರಿ
   4. 1 & 2 ತಪ್ಪು

13. ಬೆಳ್ಳಿಗಾವೆಯ ದಾಸೋಜ, ಚಾವಣ, ಚಿಕ್ಕಹಂಸ, ಗುದುಗಿನ ನಾಗೋಜ, ವೇದಾರೋಜ, ಜಕ್ಕಣ್ಣನವರು ಈ ಕೆಳಗಿನ ರಾಜವಂಶದ ಶಿಲ್ಪಿಗಳಾಗಿದ್ದಾರೆ.
   1. ಬಾದಾಮಿ ಚಾಲುಕ್ಯರ ಶಿಲ್ಪಿಗಳು
   2. ಹೊಯ್ಸಳರ ಕಾಲದ ಶಿಲ್ಪಿಗಳು
   2. ವಿಜಯ ನಗರದ ಕಾಲದ ಶಿಲ್ಪಿಗಳು
   4. ಮೈಸೂರು ಒಡೆಯರ ಕಾಲದ ಶಿಲ್ಪಗಳು

14. 'ಪರ್ಶಿಯಾದ ಹ್ಯೂಮರ್' ಎಂದು ಈ ಕೆಳಗಿನ ಯಾರನ್ನು ಕರೆಯುತ್ತಾರೆ.
   1. ಅಲ್ಬೆರೂನಿ
   2. ಉತ್ಬಿ
   3. ಫಿರ್ದೂಸ್
   4. ಫರಾಬಿ

15. ಚಹಲ್ ಘಾನಿ ಎಂಬ ಆಡಳಿತ ಕೂಟವನ್ನು ರಚಿಸಿದ ದೆಹಲಿ ಸುಲ್ತಾನ ಯಾರು?
   1. ಅಲ್ತಮಷ್
   2. ಬಲ್ಬನ್
   3. ಅಲ್ಲಾವುದ್ದಿನ್ ಖಿಲ್ಜಿ
   4. ಮಹಮದ್‌ಬಿನ ತುಘಲಕ್

16. ಭಾರತದ ಬಂಡಕಟ್ಟುಗಳಿಗೆ ಸಂಬಂಧಿಸಿದಂತೆ
   1. ಆಫ್ರಿಕಾದ ನಂತರ ವಿಶ್ವದ ಅತಿ ಹೆಚ್ಚು ಬುಡಕಟ್ಟು ಜನರನ್ನು ಹೊಂದಿರುವ ರಾಷ್ಟ್ರವೆಂದರೆ ಭಾರತ.
   2. ಜೌರ್ವಗಳು, ಓಂಗೇಗಳು, & ಸೆಂತಿನೇಲಿಗಳು ಈಶಾನ್ಯವಲಯದಲ್ಲಿ ಕಂಡುಬರುವ ಬುಡಕಟ್ಟುದವರಾಗಿದ್ದಾರೆ.
   1. 1 ಸರಿ
   2. 2 ಸರಿ
   3. 1 & 2 ಸರಿ
   4. 1 & 2 ತಪ್ಪು

17. ಭಾರತದ ರೆಡ್ ಕ್ರಾಸ್ ಸಂಸ್ಥೆಗೆ ಸಂಬಂಧಿಸಿದಂತೆ.
   1. ಇದು 1920 ರಲ್ಲಿ ಅಸ್ತಿತ್ವಕ್ಕೆ ಬಂದಿತು.

2. ಇದರ ಕೇಂದ್ರ ಕಛೇರಿ ನವದೆಹಲಿಯಲ್ಲಿದೆ.

1. 1 ಸರಿ 2. 2ಸರಿ 3. 1 & 2 ಸರಿ 4. 1 & 2 ತಪ್ಪು

18. ಈ ಕೆಳಗಿನ ಯಾವ ಹೊಂದಾಣಿಕೆಯು ತಪ್ಪಾಗಿದೆ.

1. ರಾಷ್ಟ್ರೀಯ ರಕ್ಷಣಾ ಅಕಾಡೆಮಿ – ಖಡಕ್ ವಾಸ್ಲಾ
2. ರಕ್ಷಣಾಸೇನಾ ಸಿಬ್ಬಂದಿ ಕಾಲೇಜು – ವೆಲ್ಲಿಂಗ್ ಟನ್
3. ಭಾರತೀಯ ಮಿಲಿಟರಿ ಅಕಾಡೆಮಿ – ಡೆಹರಾಡೂನ್
4. ರಾಷ್ಟ್ರೀಯ ರಕ್ಷಣಾ ಕಾಲೇಜು – ಚನ್ನೈ

19. 1. ಕರ್ನಾಟಕ ವಿಧಾನಸಭೆಯು 225 ಚುನಾಯಿತ ಸದಸ್ಯರನ್ನು ಹೊಂದಿರುತ್ತದೆ.

2. ವಿಧಾನಪರಿಷತ್ ಸದಸ್ಯರ ಸಂಖ್ಯೆಯು ಆ ರಾಜ್ಯದ ವಿಧಾನಸಭಾ ಸದಸ್ಯರ 1/3 ಭಾಗದಷ್ಟಿರುತ್ತದೆ

ಈ ಮೇಲಿನ ಹೇಳಿಕೆ ಸಂಬಂಧಿಸಿದಂತೆ

1. 1ಸರಿ 2. 2ಸರಿ 3. 1 & 2 ಸರಿ 4. 1 & 2 ತಪ್ಪು

20. 1. ಲೋಕಸಭೆಯಲ್ಲಿ ಪರಿಶಿಷ್ಟ ಜಾತಿಯವರಿಗೆ 79 ಸ್ಥಾನಗಳು ಮತ್ತು ಪಂಗಡದವರಿಗೆ 41 ಸ್ಥಾನಗಳು ಮೀಸಡಲಾಗಿದೆ.

2. ರಾಷ್ಟ್ರೀಯ ತುರ್ತುಪರಿಸ್ಥಿತಿಯ ಸಮಯದಲ್ಲಿ ಅಧಿಕಾರ ಅವಧಿಯನ್ನು ಒಂದು ವರ್ಷ ವಿಸ್ತರಿಸಬಹುದು.

ಈ ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ

1. 1ಸರಿ 2. 2ಸರಿ 3. 1 & 2 ಸರಿ 4. 1 & 2 ತಪ್ಪು

21. ಈ ಕೆಳಗಿನ ಯಾವ ಹೊಂದಾಣಿಕೆಯು ತಪ್ಪಾಗಿದೆ.

1. ಕನಿಷ್ಟ ಕೂಲಿ ಕಾಯಿದೆ – 1948
2. ವರದಕ್ಷಿಣೆ ನಿಷೇದ ಕಾಯಿದೆ – 1956
3. ಸತಿ ನಿಷೇದ ಕಾಯಿದೆ – 1987
4. ಜೀತಪದ್ದತಿ ನಿರ್ಮೂಲನಾ ಕಾಯಿದೆ – 1976

22. ಈ ಕೆಳಗಿನ ಯಾವ ಹೊಂದಾಣಿಕೆಯು ತಪ್ಪಾಗಿದೆ.

1. ಸುರಪುರ – ವೆಂಕಟಪ್ಪನಾಯಕ
2. ನರಗುಂದ – ಭಾಸ್ಕರರಾವ್
3. ಮುಂಡರಗಿ – ಭೀಮರಾವ್
4. ಹೆಮ್ಮಿಗೆಯ – ಸಂಗೊಳ್ಳಿ ರಾಯಣ್ಣ

23. ಯಾವ ವಿಧಿಯು ಮತ, ಧರ್ಮ ಜನಾಂಗ ಅಥವಾ ಲಿಂಗಭೇದ ಭಾವನೆಗಳನ್ನು ಪರಿಗಣಿಸದೇ ಎಲ್ಲರೂ ಸಮಾನರು ಎಂದು ತಿಳಿಸಿದೆ.

1. 14ನೇ ವಿಧಿ 2. 15ನೇ ವಿಧಿ 3. 16ನೇ ವಿಧಿ 4. 17ನೇ ವಿಧಿ

24. ಜಿಲೆಪ್–ಲಾ ಕಣಿವೆಯು ಈ ಕೆಳಗಿನ ಯಾವ ನಗರಗಳನ್ನು ಸೇರುತ್ತದೆ.

1. ಲ್ಹಾಸಾ – ಕಾಲಿಂಪಾಂಗ್ 2. ಸಿಮ್ಲಾ – ಕಾಲಿಂಪಾಂಗ್
3. ಲ್ಹಾಸಾ – ಸಿಮ್ಲಾ 4. ಯಾವುದು ಅಲ್ಲ.

25. ಗಂಗಾ ನದಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಉಪನದಿಯು ವಿಶೇಷವಾಗಿದೆ.

1. ಗೋಮತಿ 2. ಕೋಸಿ 3. ರಾಮಗಂಗಾ 4. ಸೋನ್

26. ವಿಲ್ಲೊ, ಜುನಿಫರ್, ಪ್ರಿಮಾರೊಸ್ ಮರಗಳು ಈ ಕೆಳಗಿನ ಸಸ್ಯವರ್ಗದಲ್ಲಿ ಕಂಡುಬರುತ್ತವೆ.
1. ಮಾಂಗ್ರೋವ್ ಸಸ್ಯವರ್ಗ
2. ನಿತ್ಯಹರಿದ್ವರ್ಣ ಅರಣ್ಯ
3. ಅಲ್ಪೈನ್ ಸಸ್ಯವರ್ಗ
4. ಮರಳು ಗಾಡಿನ ಸಸ್ಯವರ್ಗ

27. ಈ ಕೆಳಗಿನ ಯಾವ ಹೊಂದಾಣಿಕೆಯು ತಪ್ಪಾಗಿದೆ.
1. ದಾಮೋದರ ನದಿ – ಪಶ್ಚಿಮ ಬಂಗಾಳದ ಕಣ್ಣೀರಿನ ನದಿ.
2. ಕೋಸಿ ನದಿ – ಬಿಹಾರಿನ ಕಣ್ಣೀರಿನ ನದಿ.
3. ಮಹಾನದಿ – ಒರಿಸ್ಸಾದ ಕಣ್ಣೀರಿನ ನದಿ.
4. ಕಾವೇರಿ – ಕರ್ನಾಟಕದ ಕಣ್ಣೀರಿನ ನದಿ.

28. 'ದ್ರವ ರೂಪದ ಚಿನ್ನ' ಎಂದು ಯಾವುದನ್ನು ಕರೆಯಾಲುಗುತ್ತದೆ.
1. ಕಲ್ಲಿದ್ದಲು
2. ಪೆಟ್ರೋಲಿಯಂ
3. ಗ್ಯಾಸ್
4. ಚಿನ್ನ.

29. ಭಾರತದಲ್ಲಿ ಮೊಟ್ಟ ಮೊದಲಿಗೆ ಕಾಗದದ ಕೈಗಾರಿಕೆ ಎಲ್ಲಿ ಸ್ಥಾಪನೆಯಾಯಿತು.
1. ರಿಶ್ರಾ
2. ಬಾಲ್ಲಿ
3. ದಾಂಡೇಲಿ
4. ಬಾಂಬೆ.

30. ಈ ಕೆಳಗಿನ ಯಾವ ಹೊಂದಾಣಿಕೆಯು ತಪ್ಪಾಗಿದೆ.
1. ಭಾರತೀಯ ಧಾನ್ಯ ಸಂಗ್ರಹಣಾ ಕೇಂದ್ರವು ಹಾಪೂರ್‌ನಲ್ಲಿದೆ.
2. ಕೇಂದ್ರಿಯ ಆಹಾರ ಮತ್ತು ತಾಂತ್ರಿಕ ಸಂಶೋದನೆ ಸಂಸ್ಥೆಯು ಮೈಸೂರುನಲ್ಲಿದೆ.
ಈ ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ.
1. 1ಸರಿ
2. 2ಸರಿ
3. 1 & 2 ಸರಿ
4. 1 & 2 ತಪ್ಪು

31. 1932ರಲ್ಲಿ ಅಖಿಲ ಭಾರತ ಹರಿಜನ ಸಂಘವನ್ನು ಸ್ಥಾಪಿಸಿದವರು ಯಾರು?
3. ಗಾಂಧೀಜಿ
2. ಡಾ॥ ಬಿ.ಆರ್. ಅಂಬೇಡ್ಕರ್
3. ನಾರಾಯಣಗುರು
4. ಜ್ಯೋತಿ–ಬಾ–ಪುಲೆ

32. ರವೀಂದ್ರನಾಥ ಠಾಗೂರ್ ರಚಿಸಿದ್ದ '<u>ಅಮರ್ ಸೊನಾರ್ ಬಾಂಗ್ಲಾ</u>' ರಾಷ್ಟ್ರೀಯ ಗೀತೆಯು ಈ ಕೆಳಗಿನ ಯಾವ ಚಳುವಳಿಯಲ್ಲಿ ಹೆಚ್ಚಾಗಿ ಬೀದಿಗಳಲ್ಲಿ ಜನರು ಹಾಡಿದರು.
1. ಬಂಗಾಳ ವಿಭಜನೆ ವಿರೋಧ ಚಳುವಳಿ.
2. ಖಿಲಾಪತ್ ಚಳುವಳಿ.
3. ಅಸಹಕಾರ ಚಳುವಳಿ.
4. ಕಾನೂನುಭಂಗ ಚಳುವಳಿ.

33. '<u>ಅಲಾಹಿಲಾಲ್</u>' ಪತ್ರಿಕೆಯ ಸ್ಥಾಪಕರು ಯಾರು?
1. ಮೌಲಾನಾ ಮೊಹಮದ್ ಅಲಿ
2. ಹಕೀಂ ಅಜಮಲ್ ಖಾನ್
3. ಮೌಲಾನಾ ಅಬುಲ್ ಕಲಾಂ ಅಜಾದ್
4. ಮಹಮದ್ ಅಲಿ ಜಿನ್ನಾ

34. ಈ ಕೆಳಗಿನ ನಾಯಕರಗಳ ಬಂಧನವನ್ನು ಪ್ರತಿಭಟಿಸಲು ಅಮೃತಸರ ಜಿಲಿಯನ್‌ವಾಲಾಬಾಗ್‌ನಲ್ಲಿ ಜನ ಸಭೆ ಸೇರಿದ್ದರು.
3. ಡಾ॥ ಸೈಪ್ರದ್ದೀನ್ ಕಿಚಲ್ಲೂ
2. ಡಾ॥ ಸತ್ಯಪಾಲ್
3. 1 & 2
4. ಲಾಲಲಜಪತರಾಯ್

35. '<u>ದಿ ಇಂಡಿಯನ್ ಸ್ಟ್ರಗಲ್</u>' ಈ ಕೆಳಗಿನ ಯಾರ ಅತ್ಮಚರಿತ್ರೆಯಾಗಿದೆ.
3. ಸುಭಾಷ್ ಚಂದ್ರಬೋಸ್
2. ಗಾಂಧೀಜಿ
3. ದಾದಬಾಯಿನವರೋಜಿ
4. ಚಂದ್ರಶೇಖರ್ ಅಜಾದ್

36. ಪೇಟಿಯಂ. ಪಿಚಾರ್ಜಾ, ಮಾಬಿಕ್ವಿಕ್, ಡೊಮಿನೂಸ್ & ಪಿಬ್ಜಾಗಳು ಎಂದರೆ.
1. ಮೊಬೈಲ್ ವಾಲೆಟಗಳು
2. ಕಂಪ್ಯೂಟರ್ ವಾಲೆಟ್‌ಗಳು

3. ಇಂಟರ್‌ನೆಟ್ ಬ್ಯಾಂಕಿಂಗ್ 4. ಸಾಮಾಜಿಕ ಜಾಲ ತಾಣಗಳು

37. ದೇಶದ ಮೊದಲು ಅಂತಾರಾಷ್ಟ್ರೀಯ ಷೇರು ವಿನಿಮಯ ಕೇಂದ್ರವಾದ ಇಂಡಿಯಾ ಇಂಟರ್‌ನ್ಯಾಷನಲ್ ಎಕ್ಸಾಚೇಂಜ್ ಕೇಂದ್ರ ಎಲ್ಲಿ ಸ್ಥಾಪಿಸಲಾಗಿದೆ.
1. ಗಾಂಧಿನಗರ 2. ವಡೋದರ 3. ಡೆಹರಡೂನ್ 4. ಬಾಂಬೆ

38. ಟಾಟಾ ಕನ್ಸ್‌ಲ್ಟನ್ಸಿ ಸರ್ವಿಸಾನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯಾರು.
1. ನಟರಾಜನ್ ಚಂದ್ರಶೇಝುರ್ 2. ಮೈಕ್ ಪೆನ್ಸ್ 3. ಯು.ಕೆ.ಸಿನ್ಹಾ 4. ಮಿಸ್ತ್ರಿ

39. ಇತ್ತೀಚೆಗೆ ಈ ಕೆಳಗಿನ ಯಾವ ನಗರದಲ್ಲಿ ವಿಶ್ವ ಆರ್ಥಿಕ ವೇದಿಕೆ ಸಮಾವೇಶ ನಡೆಯಿತು.
1. ಜೀನಿವಾ 2. ದಾವೋಸ್ 3. ನ್ಯೂಯಾರ್ಕ್ 4. ದುಬೈ

40. ಅಂತರಾಷ್ಟ್ರೀಯ ಹಣಕಾಸು ನಿಧಿಯ ಪ್ರಕಾರ 2016–17 ರಲ್ಲಿ ಭಾರತದ ಅರ್ಥವ್ಯವಸ್ಥೆಯು ಬೆಳೆವಣಿಗೆದರ ಎಷ್ಟು?
1. ಶೇ6.6 2. ಶೇ7.2 3. ಶೇ7.7 4. ಶೇ7.1

41. 'I Promise to pay' ಹೇಳಿಕೆ ನೀಡಿರುವ ಸಂಸ್ಥೆ ಯಾವುದು?
1. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ 2. ವಿಶ್ವ ಬ್ಯಾಂಕ್
3. ಭಾರತೀಯ ರಿಸರ್ವ್ ಬ್ಯಾಂಕ್ 4. ಅಂತಾರಾಷ್ಟ್ರೀಯ ಹಣಕಾಸು ನಿಧಿ

42. 2016 ನೇ ಸಾಲಿನ ರಾಷ್ಟ್ರೀಯ ಬಸವ ಕೃಷಿ ಪ್ರಶಸ್ಥಿಯನ್ನು ಈ ಕೆಳಗಿನ ಯಾರಿಗೆ ನೀಡಲಾಗಿದೆ.
1. ನರೇಂದ್ರ ಮೋದಿ 2. ಪ್ರಣಬ್ ಮುಖರ್ಜಿ
3. ಮಾಣಿಕ್ ಸರ್ಕಾರ್ 4. ಜಯಲಲಿತ

43. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ 2015–16 ರಲ್ಲಿ ಅತಿ ಹೆಚ್ಚು ವಾಯು ಮಾಲಿನ್ಯ ಪ್ರಮಾಣ ಈ ಕೆಳಗಿನ ನಗರದಲ್ಲಿ ಕಂಡುಬಂದಿದೆ.
1. ಬೆಂಗಳೂರು 2. ದಾವಣಗೆರೆ 3. ರಾಯಚೂರು 4. ಹುಬ್ಬಳ್ಳಿ

44. ಈ ಕೆಳಗಿನ ಯಾವ ಕಾದಂಬರಿ ಡಾ. ಎಸ್.ಎಲ್. ಬೈರಪ್ಪ ಕಾದಂಬರಿಯಲ್ಲ.
1. ಉತ್ತರಕಾಂಡ 2. ಅವರಣ 3. ಕವಲು 4. ತೊಘಲಕ್

45. ಪಂಚಾಯತ್‌ರಾಜ್ ಇಲಾಖೆಯ ಗಾಮ್ ಸ್ವರಾಜ್ ಯೋಜನೆಯಡಿ ಕಂಪ್ಯೂಟರ್ ಖರೀದಿ ಹಗರಣ ಕುರಿತು ನೇಮಿಸಿದ್ದ ವಿಚಾರಣಾ ಸಮಿತಿ ಯಾವುದು?
1. ರಂಗರಾಜನ್ ಸಮಿತಿ 2. ಗೋಪಾಲಗೌಡ ಸಮಿತಿ 3. ಜಿ.ಕೆ. ಆರೋರ ಸಮಿತಿ 4. ಸದಾಶಿವ ಸಮಿತಿ

46. 1. 2016 ರ ರಣಜಿ ಟ್ರೋಪಿಯನ್ನು ಗುಜರಾತ್ ರಾಜ್ಯ ಗೆದ್ದುಕೊಂಡಿತು.
2. ಅತಿ ಹೆಚ್ಚು ರಣಜಿ ಟ್ರೋಪಿಗಳ ಗೆದ್ದ ಶ್ರೇಣಿಯಲ್ಲಿ ಕರ್ನಾಟಕ 2 ನೇ ಸ್ಥಾನದಲ್ಲಿದೆ.
ಈ ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ.
1. 1ಸರಿ 2. 2ಸರಿ 3. 1 & 2 ಸರಿ 4. 1 & 2 ತಪ್ಪು

47. ಬ್ಯಾಡ್ಮಿಂಟನ್ ಕ್ಲಬಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೊಂದಾಣಿಕೆಯು ತಪ್ಪಾಗಿದೆ.
1. ಬೆಂಗಳೂರು – ಬ್ಲಾಸ್ಟರ್ಸ್

2. ಮುಂಬೈ – ರಾಕೆಟ್ಸ್
3. ಡೆಲ್ಲಿ – ಏಸರ್ಸ್
4. ಚೆನ್ನೈ – ಹಂಟರ್ಸ್

48. 'ಲಾರ್ಸ್‌ನಾ ಸಿ' ಎನ್ನುವುದು.
1. ಮಂಜುಗಡ್ಡೆ 2. ದ್ವೀಪ 3. ಸೂಪರ್ ಕಂಪ್ಯೂಟರ್ 4. ಅಮೆರಿಕಾ ಕ್ಷಿಪಣಿ

49. 'ಎನ್ಗರಿ ನಂ–1' ಎಂಬ ಯೋಜನೆಯು ಏನಕ್ಕೆ ಸಂಬಂಧಿಸಿದೆ.
1. ಡೇಟಾ ಸಂಗ್ರಹ ಸಾಪ್ಟ್‌ವೇರ್ ಯೋಜನೆ. 2. ವಿಶ್ವದ ಅತಿ ಎತ್ತರದ ಟೆಲಿಸ್ಕೋಪ್ ಯೋಜನೆ.
3. ಭಾರತೀಯ ನೌಕ ರಕ್ಷಣೆಗೆ ಸಂಬಂಧಿಸಿದ ಯೋಜನೆ. 4. ಯಾವುದು ಅಲ್ಲ.

50. 104ನೇ ಭಾರತೀಯ ವಿಜ್ಞಾನ ಸಮಾವೇಶ ಎಲ್ಲಿ ನಡೆಯಿತು.
1. ಮೈಸೂರು 2. ಗೌಹತಿ 3. ತಿರುಪತಿ 4. ಭೂಪಾಲ್

51. 2017 ಜನವರಿಯಲ್ಲಿ ಬೆಂಗಳೂರಿನಲ್ಲಿ ಎಷ್ಟನೇ ಪ್ರವಾಸಿ ಭಾರತೀಯ ದಿವಸಾ ನಡೆಯಿತು.
1. 12ನೇ 2. 13ನೇ 3. 14ನೇ 4. 15ನೇ

52. ಸರ್ಕಾರದ ಅಭಿವೃದ್ಧಿಯೇತರ ವೆಚ್ಚಗಳು ಸಿಂಹಪಾಲು ಯಾವುದಕ್ಕೆ ಸಂಬಂಧಿಸಿದೆ.
1. ಸಬ್ಸಿಡಿಗಳು 2. ರಕ್ಷಣಾ ವೆಚ್ಚಗಳು 3. ಬಡ್ಡಿ ನೀಡಿಕೆ 4. ಆಡಳಿತ

53. ಇವುಗಳಲ್ಲಿ ಯಾವುದು ಕೇಂದ್ರ ಸರ್ಕಾರ ತೆರಿಗೆಯಲ್ಲಿ.
1. ಭೂಕಂದಾಯ 2. ಅದಾಯತೆರಿಗೆ 3. ಕಸ್ಟಮ್ಸ್‌ತೆರಿಗೆ 4. ಕಂಪನಿತೆರಿಗೆ

54. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯಾವುದನ್ನು ಕಾಗದದ ಚಿನ್ನ ಎನ್ನುತ್ತಾರೆ.
1. ಯೂರೋ 2. ಯು.ಎಸ್.ಡಾಲರ್ 3. ಚಿನ್ನದನಾಣ್ಯಗಳು 4. ಎಸ್.ಡಿ.ಆರ್‌ಗಳು

55. GNP ಮತ್ತು GDP ಗಳು ಸಮವಿರುವ ಸಂದರ್ಭವೆಂದರೆ,

1. ರಫ್ತುಗಳು = ಆಮದುಗಳು 2. ಸವಕಳಿ ವೆಚ್ಚ ಸೊನ್ನೆಯಿದ್ದಾಗ
3. ತೆರಿಗೆಗಳು ಸೊನ್ನೆಯಿದ್ದಾಗ 4. ಮಾರುಕಟ್ಟೆಯಿಂದ ನಿವ್ವಳ ಎರವಲು ಸೊನ್ನೆಯಿದ್ದಾಗ

56. ರಿಟ್ ಆಫ್ ಮ್ಯಾಂಡಮಾಸ್ ಇವರಿಗೆ ಅನ್ವಯಿಸುವುದಿಲ್ಲ.

1. ನಗರಪಾಲಿಕೆ 2. ಸಾರ್ವಜನಿಕ ಪ್ರಾಧಿಕಾರ 3. ರಾಜ್ಯಪಾಲ 4. ಕೆಳಗಿನ ನ್ಯಾಯಾಲಯ

57. ಭಾರತೀಯ ಸಂವಿಧಾನದನ್ವಯ ಉಚ್ಚ ನ್ಯಾಯಾಲಯಗಳಿಗೆ ಕೆಲವೊಂದು ರಿಟ್‌ಗಳನ್ನು ಹೊರಡಿಸಲು ಅವಕಾಶ ಮಾಡಿಕೊಡುವ ಅನುಚ್ಛೇದ ಯಾವುದು?

1. 225 2. 226 3. 32 4. 227

58. ಭಾರತೀಯ ಸಂವಿಧಾನದ ಯಾವ ಅನುಸೂಚಿಗಳಲ್ಲಿ ಪಂಚಾಯತ್ ಹಾಗೂ ಪುರಸಭೆಗಳ ಕಾರ್ಯಗಳನ್ನು ತಿಳಿಸಲಾಗಿದೆ.

1. 8 ಹಾಗೂ 9ನೇ ಅನುಸೂಚಿ
2. 9 ಮತ್ತು 10ನೇ ಅನುಸೂಚಿ
3. 10 ಮತ್ತು 11ನೇ ಅನುಸೂಚಿ
4. 11 ಮತ್ತು 12ನೇ ಅನುಸೂಚಿ

59. ಕೆಳಗಿನ ಯಾವ ಪ್ರಾಧಿಕಾರವು ಚುನಾವಣಾ ಕ್ಷೇತ್ರಗಳನ್ನು ಅಧಿಕೃತವಾಗಿ ವಿಭಜಿಸುತ್ತದೆ.
1. ಚುನಾವಣಾ ಆಯೋಗ
2. ಸರ್ವೋಚ್ಚ ನ್ಯಾಯಾಲಯ
3. ರಾಜ್ಯ ಪುನರ್ ಸಂಘಟನಾ ಆಯೋಗ
4. ಡಿಲಿಮಿಟೇಷನ್ ಆಯೋಗ

60. ಭಾರತ ಸಂವಿಧಾನದ ಪ್ರಕಾರ ಡಾ॥ ಅಂಬೇಡ್ಕರ್‌ರವರು ಯಾರನ್ನು ಅತ್ಯಂತ ಮುಖ್ಯ ಅಧಿಕಾರಿಯೆಂದು ವಿವರಿಸಿದ್ದಾರೆ.
1. ಅಟಾರ್ನಿ ಜನರಲ್
2. ಸಂಪುಟ ಕಾರ್ಯದರ್ಶಿ
3. ಭಾರತದ ನಿಯಂತ್ರಕರು ಹಾಗೂ ಮಹಾಲೆಕ್ಕಪಾಲಕರು
4. ಗೃಹ ಕಾರ್ಯದರ್ಶಿಗಳು

61. 'ಆರ್ಥಿಕ & ಸಾಮಾಜಿಕ ಯೋಜನೆಯು' ಈ ಕೆಳಗಿನ ಯಾವ ಪಟ್ಟಿಯಲ್ಲಿ ಕಂಡು ಬರುತ್ತದೆ.
1. ಕೇಂದ್ರಪಟ್ಟಿ
2. ರಾಜ್ಯಪಟ್ಟಿ
3. ಸಮವರ್ತಿ ಪಟ್ಟಿ
4. ಯಾವುದು ಅಲ್ಲ

62. A ಯ E ಮಗ ಮತ್ತು B ಯ ಮಗ D, A ಯ ಮಗಳು C ಯು D ಯನ್ನು ವಿವಾಹವಾಗಿದ್ದಾಳೆ, D ಯು E ಗೆ ಯಾವ ಸಂಬಂಧ ಹೊಂದಿದ್ದಾನೆ.
1. ಸಹೋದರ
2.ಭಾವ
3. ಮಾವ
4. ತಂದೆ

63. KSET 2011 ನ್ನು ಸಂಕೇತ ಬಳಸಿ LUHX 3122 ಎಂದು ಬರೆದರೆ TREE 4233 ಸಂಕೇತ ಬಳಸಿ ಹೇಗೆ ಬರೆಯಬಹುದು?
1. UTHH 5344
2.TUHH 4122
3.HHTU 4122
4.THHU 5344

64. ಕೆಳಗೆ ಕೊಟ್ಟ I ಮತ್ತು II ಹೇಳಿಕೆಗಳ ಬಳಕೆ ಒಂದು ನಿರ್ಧಾರ ಕೊಟ್ಟಿದೆ. ಹೇಳಿಕೆಗಳು ಸರಿಯಾಗಿದ್ದರೆ ಯಾವ ನಿರ್ಧಾರಕ್ಕೆ ಬರಬಹುದು.

I: ಹೆಚ್ಚಿನ ಪದವೀಧರರು ಉದ್ಯೋಗಗಳಿಸುತಾರೆ,

I I: ಅವನು ಒಬ್ಬ ಪದವೀಧರ

<u>ನಿರ್ಧಾರ</u>

ಅವನು ಉದ್ಯೋಗ ಗಳಿಸುತ್ತಾನೆ,
1. ಖಂಡಿತ ಸರಿ
2. ಖಂಡಿತ ತಪ್ಪು
3. ಬಹುಶಃ ಸರಿ
4. ಬಹುಶಃ ತಪ್ಪು

65. ವಿದ್ಯುನ್ಮಾನ ನಿಧಿಗಳ ವರ್ಗಾವಣೆ ವ್ಯವಸ್ಥೆಯು ___________ ನ್ನು ಉಪಯೋಗಿಸುತ್ತಾರೆ.
1. ಎಂಐಸಿ ಆರ್
2. ಮಾರ್ಕ್ ಸೆನ್ಸಿಂಗ್
3. ಪೇರ್ಟ –ಎ– ಪಂಚ್
4. ಮೇಲಿನ ಯಾವುದು ಅಲ್ಲ.

66. ಒಂದು ಹಾಸ್ಟಲ್‌ನ 10 ಹುಡುಗರ ಸರಾಸರಿ ವಯಸ್ಸು 14 ವರ್ಷ ಒಬ್ಬ ಹೊಸ ಹುಡುಗನ ದಾಖಲಾತಿಯಿಂದ ಸರಾಸರಿ ವಯಸ್ಸು 1ವರ್ಷ ಕಡಿಮೆಯಾಯಿತು ಹೊಸ ಹುಡುಗನ ವಯಸ್ಸೆಷ್ಟು
1. 4
2. 5
3. 3
4. 2

67. ಹಿಂದೂ ಮಹಾಸಾಗರಕ್ಕೆ ಸೇರದ ನದಿ ಯಾವುದು?
1. ಹ್ವಾಂಗ್ ಹೊ
2. ಟೈಗ್ರಿಸ್
3. ಸಿಟ್ಯಾಂಗ್
4. ಇರವಾಡಿ

68. ಆಲಿವ್ ಫಿಗ್ ಓಕ್ ಮರಗಳು ಈ ಕೆಳಗಿನ ಸಸ್ಯವರ್ಗದಲ್ಲಿ ಕಂಡು ಬರುತ್ತವೆ.
1. ಮೆಡಟಿರೇನಿಯನ್ ಸಸ್ಯವರ್ಗ
2. ಮಾನ್ಸೂನ್ ಸಸ್ಯವರ್ಗ
3. ಕೂನಿಫೆರಿಸ್ ಸಸ್ಯವರ್ಗ
4. ಸ್ಟೆಪ್ಪಿ ಸಸವರ್ಗ

69. ಏಷ್ಯಾ ಖಂಡವನ್ನು ಈ ಕೆಳಗಿನ ಯಾವ ಸಾಗರ ಸುತ್ತುವರೆದಿಲ್ಲ.
1. ಆರ್ಕ್ಟಿಕ್ ಸಾಗರ 2. ಪೆಸಿಫಿಕ್ ಸಾಗರ 3. ಹಿಂದೂಸಾಗರ 4. ಅಟ್ಲಾಂಟಿಕ್ ಸಾಗರ

70. ದೆಹಲಿಯಲ್ಲಿರುವ ಕುತುಬ್ ಮಿನಾರ್ ಎತ್ತರ ಎಷ್ಟು?
1. 71 ಮೀ 2. 72 ಮೀ 3. 70 ಮೀ 4. 73 ಮೀ

71. ಒಬ್ಬ ವ್ಯಕ್ತಿಯ ವೇತನವನ್ನು ಶೇಕಡಾ 20ರಷ್ಟು ಕಡಿಮೆ ಮಾಡಲಾಗಿದೆ. ಅವನು ತನ್ನ ಮೊದಲಿನ ವೇತನವನ್ನು ಪಡೆಯಲು ಹೆಚ್ಚಿಸಬೇಕಾದ ಶೇಕಡಾ ವೇತನವು ಎಷ್ಟು?
1. 20% 2.22% 3.24% 4.25%

72. ಪಟ್ಟಿ 1 ಮತ್ತು ಪಟ್ಟಿ 2 ನ್ನು ಹೊಂದಿಸಿ ಮತ್ತು ಸರಿಯಾದ ಉತ್ತರಗಳನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆ ಮಾಡಿ.

| ಪಟ್ಟಿ 1 (ಸಂಸ್ಥೆಗಳು) | ಪಟ್ಟಿ 2 (ಮುಖ್ಯಸ್ಥರು) |
|---|---|
| 1. ರಾಷ್ಟ್ರೀಯ ಹಿಂದುಳಿತ ವರ್ಗಗಳು ಆಯೋಗ | ಎ) ಹೆಚ್.ಎಲ್.ದತ್ತು |
| 2. ರಾಷ್ಟ್ರೀಯ ರೈತರ ಆಯೋಗ | ಬಿ) ಎಂ.ಎಸ್.ಸ್ವಾಮಿನಾಥನ್ |
| 3. ರಾಷ್ಟ್ರೀಯ ಮಾನವ ಹಕ್ಕುಗಳು ಆಯೋಗ | ಸಿ) ವಂಗಲ ಈಶ್ವರಯ್ಯ |
| 4.ರಾಷ್ಟ್ರೀಯ ಮಹಿಳಾ ಆಯೋಗ | ಡಿ) ಲಲಿತ ಕುಮಾರ ಮಂಗಳಂ |

| | A | B | C | D |
|---|---|---|---|---|
| 5. | 4 | 3 | 2 | 1 |
| 6. | 3 | 2 | 1 | 4 |
| 7. | 4 | 2 | 3 | 1 |
| 8. | 1 | 3 | 4 | 2 |

73. "ನಿರ್ಮಲ ಗ್ರಾಮ ಪುರಸ್ಕಾರ" ವು ಇದರೊಂದಿಗೆ ಸಂಬಂಧಿಸಿದೆ.
1. ಶುದ್ಧ ಕುಡಿಯುವ ನೀರಿನ ಸರಬರಾಜು 2.ಅರಣ್ಯೀಕರಣ
3. ಸಂಪೂರ್ಣ ನೈರ್ಮಲ್ಯ ಆಂದೋಲನ 4.ಗ್ರಾಮೀಣ ರಸ್ತೆಗಳ ನಿರ್ಮಾಣ

74. ಯೋಧನೊಬ್ಬನ ಸಾಹಸದ ಸಂಸ್ಮರಣೆಗಾಗಿ ಸ್ಥಾಪಿಸಲ್ಪಡುವ ಶಿಲಾ ಸ್ಮಾರಕ.
1. ಪಟ್ಟದಕಲ್ಲು 2.ವೀರಗಲ್ಲು 3.ಮಾಸ್ತಿಕಲ್ಲು 4.ನಿಜಗಲ್ಲು

75. ಪಂಚಾಯತ್‌ರಾಜ್ ಸಂಸ್ಥೆಗಳು ಹೀಗೆ ಕಾರ್ಯ ನಿರ್ವಹಿಸುತ್ತವೆ.
1. ಅಸ್ವತಂತ್ರ ಸರ್ಕಾರ 2. ಸ್ವಾಧೀನ ಸರ್ಕಾರ 3. ಸ್ಥಳೀಯ ಸರ್ಕಾರ 4. ಅಧೀನತಾ ಸರ್ಕಾರ

76. ಅಂತರರಾಷ್ಟ್ರೀಯ ಕಾರ್ಮಿಕ ಸಂಘ (ILO) ಪ್ರಸ್ತುತ ಡೈರೆಕ್ಟರ್ ಜನರಲ್‌ರವರು
1. ಜನಾರ್ಧನ ನೇಗಿ 2. ಗೈ ರೈಡರ್ 3. ಮಾರ್ತಾ ಜೊಕಿಮೊಕೊಯಿಜ್ 4. ನೇಲ್ ಹ್ಯಾರಿ

77. NASA ದ ಮ್ಯಾಗ್ನೆಟೊ ಸ್ಪಿಯರಿಕ್ ಮಲ್ಟಿ–ಸ್ಕೇಲ್ (MMS) ಮಿಷನ್‌ಗೆ ಗಿನ್ನಿಸ್ ವಿಶ್ವದಾಖಲೆ ಸೃಷ್ಟಿಸಿದ ಸಾಧನೆ.
1. ಮಿಷನ್ ಟು ಮಾರ್ಸ್. 2. ಅತಿ ಹೆಚ್ಚಿನ ಎತ್ತರದಲ್ಲಿ ಜಿ.ಪಿ.ಎಸ್. ಸಿಗ್ನಲ್‌ಗಳ ಸ್ಥಾಪನೆ
3. ಗುರು ಗ್ರಹಕ್ಕೆ ರಾಕೆಟ್‌ಗಳನ್ನು ಕಳುಹಿಸುವುದು. 4. ಭೂಮಿಯ ಕಂಪನಗಳನ್ನು ಅಳೆಯುವುದು.

78. ಈ ಕೆಳಗಿನವರಲ್ಲಿ ಯಾರು ಪ್ರವಾಸೋಧ್ಯಮ ಆಂದೋಲನ "ಇನ್‌ಕ್ರೆಡಿಬಲ್ ಇಂಡಿಯ" ದ ಮಾನ್ಯ ರಾಯಭಾರಿಗಳು.
1. ಐಶ್ವರ್ಯ ರೈ 2. ದೀಪಿಕಾ ಪಡುಕೋಣೆ
3. ಆಲಿಯಾ ಭಟ್ 4. ಪ್ರಿಯಾಂಕ ಚೋಪ್ರಾ

79. ರೂ. 2,000 ಹೊಸ ಕರೆನ್ಸಿ ನೋಟಿಗೆ ಸಂಬಂಧಿಸಿದ ವಿವರಗಳನ್ನು ತಿಳಿಸುವ ಸರಿಯಾದ ಅಂಶಗಳನ್ನು ಆಯ್ಕೆ ಮಾಡಿ.

1. ಅದರಲ್ಲಿ ಒಂದು ಹುದುಗಿಸಿದ ನ್ಯಾನೊ ಚಿಪ್ ಇರುತ್ತದೆ.
2. ದಾರದ ಮೇಲೊತ್ತಿನ (thread motif) ಬಣ್ಣವು ಕೆಂಪಿನಿಂದ ಹಸಿರಾಗಿ ಬದಲಾಗಿತ್ತದೆ.
3. ಅದರಲ್ಲಿ ಲಾಂಛನ (Logo) ಮತ್ತು ಧ್ಯೇಯವಾಕ್ಯ 'ಸ್ವಚ್ಛಭಾರತ ಅಭಿಯಾನ' ಇದೆ.
4. ನೋಟಿನ ಹಿಂಬದಿಯು ಚಂದ್ರಯಾನದ ಚಿತ್ರವನ್ನು ತೋರಿಸುತ್ತದೆ.

ಕೆಳಗಿನ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

1. 1 ಮತ್ತು 2 ಸರಿ 2. 1 ಮತ್ತು 3 ಸರಿ 3. 1, 2 ಮತ್ತು 4 ಸರಿ 4. 2, 3 ಮತ್ತು 4 ಸರಿ

80. LINUX ಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಆಯ್ಕೆ ಮಾಡಿರಿ, ಇದು

1. ಮೈಕ್ರೊಸಾಫ್ಟ್ ವಿಂಡೋಸ್ ಗೆ ಪಾರಕ 2. ವೈಯಕ್ತಿಕ ಕಂಪ್ಯೂಟರ್‌ಗಳಲ್ಲಿ ಬಳಸುವ OS
3. ಕಾರ್ಯ ನಿರ್ವಹಿಸಿವ ವ್ಯವಸ್ಥೆಯಲ್ಲ 4. UNIX ನಿಂದ ಬೆಂಬಲಿಸಲ್ಪಟ್ಟಿಲ್ಲ

81. ತ್ಸೆ–ತ್ಸೆ (tse-tse) ನೊಣಗಳಿಂದ ಯಾವ ರೋಗವು ಉಂಟಾಗುತ್ತದೆ?

1. ಅಜೀರ್ಣ ಸಂಬಂಧಿ ಕಾಯಿಲೆಗಳು 2. ಪ್ರಾಣಿ ಕ್ಯಾನ್ಸರ್ 3. ನಿದ್ರಾ ಅಸ್ವಸ್ಥತೆ ರೋಗ 4. ಬಾಬಿ ಸಂಬಂಧಿ ಕಾಯಿಲೆಗಳು

82. ಈ ಕೆಳಗಿನವಿಗಳಲ್ಲಿ ಹೆಚ್ಚು ರಾಶಿಯನ್ನು ಹೊಂದಿರುವ ಕಣ.

1. ಡ್ಯೂಟಿರಾನ್ 2. $\alpha$–ಕಣ 3.ಪ್ರೋಟಾನ್ 4. $\beta$–ಕಣ

83. ಓಝೋನ್ ರಂಧ್ರವೆಂದರೆ

1. ಓಝೋನ್ ಪದರದಲ್ಲಿರುವ ರಂಧ್ರ.
2. ಟ್ರೋಪೋಸ್ಫಿಯರ್‌ನಲ್ಲಿರುವ ಓಝೋನ್ ಪದರವು ಕಡಿಮೆಯಾಗಿರುವುದು.
3. ಸ್ಟ್ರಾಟೋಸ್ಫಿಯರ್‌ನಲ್ಲಿನ ಓಝೋನ್ ಪದರವು ದಪ್ಪದಲ್ಲಿ ಕಡಿಮೆಯಾಗಿದೆ.
4. ಟ್ರೋಪೋಸ್ಫಿಯರ್‌ನಲ್ಲಿ ಓಝೋನ್ ಪದರದ ದಪ್ಪದಲ್ಲಿ ಹೆಚ್ಚಳ ಹೆಚ್ಚಾಗಿದೆ.

84. $27^{0}$C ನಿರಪೇಕ್ಷ ತಾಪಮೌಲ್ಯಕ್ಕೆ ಸಮಾನವಾದದ್ದು

1. 200 ಕೆ (K) 2. 300 ಕೆ (K) 3. 400 ಕೆ (K) 4. 246 ಕೆ (K)

85. ಕ್ಷೌರದ ಕುಂಚವನ್ನು ನೀರಿನಲ್ಲಿ ಅದ್ದಿದಾಗ ಕೂದಲುಗಳು ಚದುರುತ್ತವೆ, ನೀರಿನಿಂದ ಹೊರತೆರೆದಾಗ ಕೂದಲುಗಳು ಒಂದಕ್ಕೊಂದು ಅಂಟಿಕೊಳ್ಳುತ್ತವೆ. ಇದಕ್ಕೆ ಕಾರಣ

1. ಸ್ನಿಗ್ಧತ್ವ (viscosity) 2. ಅಭಿಸರಣೆ (osmosis)
3. ಮೇಲ್ಮೈಕರ್ಷಣ (surface tension) 4. ಸ್ಥಿತಿಸ್ಥಾಪಕತ್ವ (Elasticity)

86. "ಸಾರ್ವತ್ರಿಕ ವಯಸ್ಕರ ಮತದಾನ ಪದ್ಧತಿ" ಪರಿಕಲ್ಪನೆಗೆ, ಒಂದು ಹೇಳಿಕೆ ಸೂಕ್ತವಾಗಿಲ್ಲ, ಅದು

1. ಮತದಾನದ ಹಕ್ಕುನ್ನು ಎಲ್ಲಾ ವಯಸ್ಕ ನಾಗರಿಕರಿಗೆ ನೀಡಬೇಕು.
2. ಈ ಹಕ್ಕು ಧರ್ಮ, ಜಾತಿ, ಜನಾಂಗ, ಉಪಜಾತಿ, ಬಣ್ಣ, ಲಿಂಗ ತಾರತಮ್ಯ ಹೊರತಾಗಿರಬೇಕು.
3. ಏಲಿಯನ್ನರು ಮತ್ತು ನಾಗರೀಕರಲ್ಲದವರಿಗೂ ಮತದಾನದ ಹಕ್ಕು ನೀಡುವುದು.
4. ಇದು "ಒಬ್ಬ ವ್ಯಕ್ತಿ, ಒಂದು ಮತ" ಎಂಬ ತತ್ವದ ಮೇಲೆ ನಿಂತಿದೆ.

87. ವಿಶ್ವ ಅರಣ್ಯ ದಿನಾಚರಣೆಯನ್ನು ________ ದಿನದಂದು ಆಚರಿಸಲಾಗಿತ್ತದೆ.

1. 5 ನೇ ಜೂನ್ 2. 23 ನೇ ಮಾರ್ಚ್ 3. 21 ನೇಮಾರ್ಚ್ 4. 20 ನೇ ಡಿಸೆಂಬರ್

88. ನೇರಳಾತೀತ (UV) ವಿಕಿರಣ ಹೀರಿಕೊಳ್ಳುವ ಪ್ರಮುಖ ವಲಯ.
1. ಎಕೊಸ್ಪಿಯರ್ 2. ಅಯಾನೊಸ್ಪಿಯರ್ 3. ಸ್ಟ್ರಾಟೊಸ್ಪಿಯರ್ 4. ಬಯೊಸ್ಪಿಯರ್

89. ಅಯೋಡಿನ್ ಕೊರತೆಯಿಂದ ______ ಉಂಟಾಗುತ್ತದೆ.
1. ಕ್ರೆಟಿನಿಸಂ 2. ಸ್ಕರ್ವಿ 3. ರಿಕೆಟ್ಸ್ 4. ಫ್ಲೋರೋಸಿಸ್

90. ಕಂಪೆನಿಗಳು ಈಗ ಅಂತರ್ಜಾಲದ ಮೂಲಕ ಉತ್ಪನ್ನಗಳನ್ನು ಮಾರಾಟ ಮಾಡುತ್ತಿವೆ ಮತ್ತು ವಿತರಿಸುತ್ತಿವೆ. ಈ ರೀತಿಯ ಬಿಸಿನೆಸ್ ಅನ್ನು ______ ಎಂದು ಕರೆಯಲಾಗುತ್ತದೆ.
1. ಹೊರಗುತ್ತಿಗೆ 2.ಇ–ಕಾಮರ್ಸ್ 3.ಚಿಲ್ಲರೆ ಮಾರಾಟ 4.ವ್ಯವಹಾರ ಪ್ರಕ್ರಿಯೆ ಹೊರಗುತ್ತಿಗೆ (BPO)

91. ಭಾರತ ಸಂವಿಧಾನದ ಅಡಿಯಲ್ಲಿ ಭಾರತೀಯ ನಾಗರೀಕರ ಸೇವಕರನ್ನು ರಕ್ಷಿಸಲು ಸಂವಿಧಾನಿಕ ಪ್ರತಿಪಾದನೆಗೊಂಡಿರುವುದು.
1. 310 ಕಲಂ 2. 312 ಕಲಂ 3. 311 ಕಲಂ 4. 315ಕಲಂ

92. ಅಕ್ಬರನ ರಾಜಪ್ರತಿನಿಧಿ ಈ ಕೆಳಗಿನವರು ಯಾರು?
1. ರಾಜಮಾನ್‌ಸಿಂಗ್ 2. ಬೈರಾಂಖಾನ್ 3. ಹೇಮು 4. ರಾಜತೋದರಮಲ್ಲ

93. ಭಾರತದಲ್ಲಿ ಯಾವಾಗ ದಶಮಾಂಶ ನಾಣ್ಯ ಪದ್ಧತಿಯನ್ನು ಪರಿಚಯಿಸಲಾಯಿತು?
1. 1947 2. 1950 3. 1957 4. 1960

94. ಮ್ಯುಚುವಲ್ ಫಂಡ್ಸ್ ಮತ್ತು ಷೇರು ಮಾರುಕಟ್ಟೆಗಳ ಮೇಲೆ ಮೂಲ ನಿಯಂತ್ರಣಾಧಿಕಾರವನ್ನು ಹೊಂದಿರುವುದು.
1. ಭಾರತ ಸರ್ಕಾರ 2. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI)
3. ಸೆಕ್ಯುರಿಟೀಸ್ ಅಂಡ್ ಎಕ್ಸ್‌ಛೇಂಜ್ ಬೋರ್ಡ್ ಆಫ್ ಇಂಡಿಯಾ (SEBI) 4. ಸ್ಟಾಕ್ ಎಕ್ಸ್‌ಛೇಂಜ್ (Stock Exchange)

95. ಹನಿ ನೀರಾವರಿ ಪದ್ಧತಿಯನ್ನು ಈ ಕೆಳಗಿನ ಯಾವುದಕ್ಕೆ ಹೆಚ್ಚಾಗಿ ಭಾರತದಲ್ಲಿ ಬಳಸುತ್ತಾರೆ?
1. ಟೀ ಮತ್ತು ಕಾಫಿ 2. ಭತ್ತ 3. ಗೋಧಿ 4. ತರಕಾರಿಗಳು

96. ಭಾರತದ ಈ ಕೆಳಗಿನ ಅರ್ಥಶಾಸ್ತ್ರಜ್ಞ ವಿಶ್ವ ಸಂಸ್ಥೆಯ ಮಾನವ ಅಭಿವೃದ್ಧಿ ಸೂಚ್ಯಾಂಕವನ್ನು ತಯಾರಿಸಲು ಸಹಾಯ ಮಾಡಿದ್ದಾರೆ.
1. ಜಗದೀಶ್ ಭಗವತಿ 2. ಅಮಾರ್ತ್ಯಸೇನ್ 3. ಅರವಿಂದ್ ಪನಗಾರಿಯಾ 4. ಅಶೋಕ್ ದೇಸಾಯಿ

97. ಈ ಕೆಳಗಿನ ಯಾರು ಭಾರತೀಯ ಹಣಕಾಸು ನೀತಿಯನ್ನು ರೂಪಿಸುತ್ತಾರೆ.
1. ನೀತಿ ಆಯೋಗ 2. ಹಣಕಾಸು ಮಂತ್ರಿ 3. ಹಣಕಾಸು ಆಯೋಗ 4. ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ

98. ವಿಶ್ವದ ಅತಿ ದೊಡ್ಡ ಮೈದಾನ ಯಾವುದು?
1. ಸೈಬೀರಿಯನ್ ಮೈದಾನ 2. ಇಂಡೋ–ಗ್ಯಾಂಗ್‌ಟಿಕ್ ಮೈದಾನ 3. ಪೈರಿಸ್ ಮೈದಾನ 4. ಸ್ಟೇಪಿ ಮೈದಾ

99. ಗೋವಿಂದ ಪಶು ವಿಹಾರ ವನ್ಯ ಜೀವಿಧಾಮ ಈ ಕೆಳಗಿನ ಯಾವ ರಾಜ್ಯದಲ್ಲಿ ಕಂಡು ಬರುತ್ತದೆ.
1. ಹಿಮಾಚಲ ಪ್ರದೇಶ 2. ಉತ್ತರಖಂಡ್ 3. ಉತ್ತರಪ್ರದೇಶ 4. ಮಧ್ಯಪ್ರದೇಶ

100.ಈ ಕೆಳಗಿನ ಯಾವ ರಾಷ್ಟ್ರೀಯ ಉದ್ಯಾನವನ ಯುನೆಸ್ಕೋ ವಿಶ್ವ ಪರಂಪರ ಪಟ್ಟಿಯಲ್ಲಿ ಬರುವುದಿಲ್ಲ.
1. ಕಾಜಿರಂಗ ನ್ಯಾಷನಲ್ ಪಾರ್ಕ್ 2. ನಂದಾದೇವಿ ನ್ಯಾಷನಲ್ ಪಾರ್ಕ್
3. ಸುಂದರ್ ಬನ್ ನ್ಯಾಷನಲ್ ಪಾರ್ಕ್ 4. ಡೆಸರ್ಟ್ ನ್ಯಾಷನಲ್ ಪಾರ್ಕ್